2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 34/2024

| | | |
|---|---|---|
| ಸಾಕ್ಷಿದಾರರ ಹೆಸರು | - ಶಂಕರ | ಪಿಡಬ್ಲೂ - 04 |
| ತಂದೆಯ ಹೆಸರು | - ಬಿರುಕುಳ | ಸಿಡಬ್ಲೂ - 06 |
| ವಯಸ್ಸು | - 58 ವರ್ಷ | |
| ಉದ್ಯೋಗ | - ಕೂಲಿ | |
| ವಾಸ ಸ್ಥಳ | - ಕೂವೆ ಗ್ರಾಮ, ಮೂಡಿಗೆರೆ | |

ದಿನಾಂಕಃ **09.01.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತರು ಗೊತ್ತು. ಅವರು ಎಸ್ಟೇಟಿನಲ್ಲಿ ನಮ್ಮ ಜೊತೆ ಕೂಲಿ ಕೆಲಸ ಮಾಡಿಕೊಂಡಿದ್ದರು. ಚಾಸಾ.1 ರಿಂದ 3 ಗೊತ್ತು. ಆರೋಪಿ ಎಸ್ಟೇಟಿನ ಸಿಬ್ಬಂದಿಗಳು. ನಾನು ಟಾಟಾ ಎಸ್ಟೇಟಿನಲ್ಲಿ 25 ವರ್ಷಗಳಿಂದ ಕೂಲಿ ಕೆಲಸ ಮಾಡಿಕೊಂಡಿದ್ದೇನೆ. ಚಾಸಾ.4, 5 ಮತ್ತು 6 ನಮ್ಮ ನಮ್ಮ ಎಸ್ಟೇಟಿನಲ್ಲಿ ಕೂಲಿ ಕೆಲಸ ಮಾಡುತ್ತಾರೆ. ಚಾಸಾ.8 ನಮ್ಮ ಎಸ್ಟೇಟಿನ ಕಚೇರಿಯಲ್ಲಿ ಕೆಲಸ ಮಾಡುತ್ತಾರೆ.

2. ಮೃತ ಶಿವಕುಮಾರನನ್ನು ನೋಡಿದ್ದೇನೆ. ಆತ 2 ನೇ ಆರೋಪಿಯ ಮಗ. ಈಗ ನೋಡುತ್ತಿರುವ ನಿಪಿ.13 ರ ನೋಟೀಸಿನಲ್ಲಿ ನನ್ನ ಸಹಿ ಇದ್ದು ಸಾಕ್ಷಿಯ ಸಹಿಯನ್ನು ನಿಪಿ.13(ಎ) ಎಂದು, ಸ್ಥಳ ಪಂಚನಾಮೆಯನ್ನು ನಿಪಿ.14 ಎಂದು ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಪೋಟೊದಲ್ಲಿ ನಾನು ಕೂಡ ಇದ್ದು ಅದನ್ನು ನಿಪಿ.15 ಎಂದು ಗುರುತಿಸಲಾಯಿತು.

3. ನಿಪಿ.13 ಮತ್ತು 14 ಕ್ಕೆ ದಿಃ 21.12.2023 ರಂದು ನಮ್ಮ ಎಸ್ಟೇಟಿಗೆ ಪೋಲೀಸರು ಬಂದಾಗ ನಿಪಿ.13 ಮತ್ತು 14 ರ ದಾಖಲೆಗೆ ಸಹಿ ಮಾಡಿದ್ದೇನೆ. ಬಾಳೂರು ಪೋಲೀಸರು ನಮ್ಮ ಎಸ್ಟೇಟಿಗೆ ಬಂದು 2 ನೇ ಆರೋಪಿ ಯ ಮಗು ಮರಣಹೊಂದಿದ ವಿಚಾರದಲ್ಲಿ ಸ್ಥಳ ಮಹಜರು ಕ್ರಮ ಜರುಗಿಸಿದ್ದಾರೆ.

4. ಆರೋಪಿತರು ಪೋಲೀಸರಿಗೆ ಸ್ಥಳ ತೋರಿಸಿದ್ದರು. ಪೊಲೀಸರು 1 ಮತ್ತು 2 ನೇ ಆರೋಪಿತರನ್ನು ಠಾಣೆಯಿಂದ ಜೊತೆಯಲ್ಲಿ ಕರೆತಂದಿದ್ದರು. ಆ ಸಮಯದಲ್ಲಿ ಚಾಸಾ.7 ಹರೀಶ್ ಕುಮಾರ್ ಕೂಡ ಹಾಜರಿದ್ದರು. 1 ನೇ ಆರೋಪಿ ಸದರಿ ಸ್ಥಳದಲ್ಲಿ ಮಗುವಿನ ಕತ್ತು ಹಿಚುಕಿದ ವಿಚಾರ ಪೋಲೀಸರಿಗೆ ತಿಳಿಸಿದ. ಮಹಜರು ಕ್ರಮ ಜರುಗಿಸಿದಾಗ ಮದ್ಯಾಹ್ನ 12.30 ಗಂಟೆ ಸಮಯ ಆಗಿತ್ತು. ಆ ಸಮಯದಲ್ಲಿ ನಿಪಿ.15 ರ ಭಾವಚಿತ್ರ ಸಂಗ್ರಹಿಸಿದ್ದಾರೆ. ನಿಪಿ.14 ಮಹಜರಿಗೆ ನಾನು ಮತ್ತು ಚಾಸಾ.7 ರವರು ಸ್ಥಳದಲ್ಲಿ ಸಹಿ ಮಾಡಿದ್ದೇವೆ. ನಂತರ ಪೋಲೀಸರು ಆರೋಪಿತರನ್ನು ಠಾಣೆಗೆ ಕರೆದುಕೊಂಡು ಹೋದರು.

5. ನಿಪಿ.15 ರಲ್ಲಿ ತೋರಿಸುವ ಸ್ಥಳದಿಂದ ಸುಮಾರು 400 ಮೀಟರ್ ದೂರಕ್ಕೆ ಪೋಲೀಸರನ್ನು 1 ನೇ ಆರೋಪಿ ಕರೆದುಕೊಂಡು ಹೋಗಿದ್ದ. ಅದು ಬಾಳೂರು ಕಡೆಗೆ ಹೋಗುವ ರಸ್ತೆ ಇದ್ದು ಅಲ್ಲಿ ಮಗುವಿನ ಪ್ರಜ್ಞೆ ತಪ್ಪಿದ್ದಾಗಿ ಆರೋಪಿ ಮಾಹಿತಿ ನೀಡಿದ್ದ. ಅಲ್ಲಿ ಪೋಲೀಸರು ಈಗ ತೋರಿಸಿದ ನಿಪಿ.16 ರಂತೆ ಮಹಜರು ಕ್ರಮ ಜರುಗಿಸಿದರು. ಆ ಸಮಯದಲ್ಲಿ ಸಂಗ್ರಹಿಸಿದ ಭಾವಚಿತ್ರಗಳನ್ನು

ಈಗ ನೋಡುತ್ತಿದ್ದು ಅವುಗನ್ನು ನಿಪಿ.17 ಮತ್ತು 18 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು;ಶ್ರೀ.ಎನ್.ಡಿ. (ಡಿ.ಎಲ್.ಎಸ್.ಎ) ವಕೀಲರಿಂದ ಆರೋಪಿ ಪರವಾಗಿಃ</u>

6. ನಾನು ಗ್ರಾಮ ಪಂಚಾಯತಿ ಸದಸ್ಯನಲ್ಲ. ನಿಪಿ.15, 17 ಮತ್ತು 18 ರ ಭಾವಚಿತ್ರ ತೆಗೆಯಲು ನಾನು ಪೋಲೀಸರು ಹೇಳಿದಂತೆ ಸಹಕರಿಸಿದ್ದೇನೆ. ನಿಪಿ.13, 14 ಮತ್ತು 16 ರ ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಹೇಳಲಾಗುವುದಿಲ್ಲ. ಪೋಲೀಸರು ನನಗೆ ಮುಂಚಿತವಾಗಿ ಸ್ಥಳಕ್ಕೆ ಬರಲು ಸೂಚನೆ ನೀಡಿದ್ದರು. ಆ ಸಮಯದಲ್ಲಿ ನಾನು ಎಸ್ಟೇಟಿನ ಒಳಗಡೆ ಇದ್ದೆ. ಆರೋಪಿತರು ಪೋಲೀಸರು ಹೇಳಿದಂತೆ ಆ ಸಮಯದಲ್ಲಿ ಸಹಕರಿಸಿದ್ದಾರೆ.

7. ಪೋಲೀಸರು ಪೋಟೋಗಳನ್ನು ಮೊಬೈಲಿನಲ್ಲಿ ಸಂಗ್ರಹಿಸಿದರು. ಪೋಲೀಸರು ನನ್ನ ಸಮಕ್ಷಮ ನಿಪಿ.14 ಮತ್ತು 16 ರ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ.

8. ಎಸ್ಟೇಟಿನಲ್ಲಿ ಮೃತಪಟ್ಟ ಎಷ್ಟು ಜನರಿಗೆ ಪರಿಹಾರ ಕೊಟ್ಟಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ನಮ್ಮ ಎಸ್ಟೇಟಿನಲ್ಲಿ ಹೊರಗಡೆಯಿಂದ ಬರುವ ಕೂಲಿಯವರಿಗೆ ವಸತಿ ವ್ಯವಸ್ದೆ ಇದೆ. ಕೂಲಿ ಕಾರ್ಮಿಕರು ಹಾಗೆ ವಾಸವಿರುವ ಸಮಯದಲ್ಲಿ ಅವರ ಮದ್ಯೆ ಜಗಳವಾಗುತ್ತದೆ ಎಂದರೆ ಸರಿಯಲ್ಲ.

9. ಪೋಲೀಸರು ಹೇಳಿಕೊಟ್ಟ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮೃತ ಶಿವಕುಮಾರನ ಮರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮೃತ ಶಿವಕುಮಾರನ ಬಾಬ್ತು ಪರಿಹಾರ ಸಿಗಲಿ ಎಂದು

ಮ್ಯಾನೇಜರ್ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ